C.R.P.67

Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No.270/2023 ಪಿ.ಡಬ್ಲ್ಯೂ-3 ಸಿ.ಡಬ್ಲ್ಯೂ-8

ದಿನಾಂಕಃ- 09.12.2025 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಟಿ. ಎಂ. ಪುನೀತ್ |
| ತಂದೆಯ ಹೆಸರು | ಜಿ. ಮಂಜುನಾಥ |
| ವಯಸ್ಸು | 43 ವರ್ಷ |
| ಉದ್ಯೋಗ | PI, ಬಿಳಿಕೆರೆ ಪೊಲೀಸ್ ಠಾಣೆ, ಮೈಸೂರು ಜಿಲ್ಲೆ. |
| ವಾಸ | ಬಿಳಿಕೆರೆ |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು 05.08.2022 ರಿಂದ 19.04.2025 ರವರೆಗೆ ಕೆ ಆರ್ ಎಸ್ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿದ್ದೇನೆ.

2. ಕೆ ಆರ್ ಸಾಗರ ವೃತ್ತದ ಪರಿಧಿಯಲ್ಲಿ ಅರಕೆರೆ ಪೊಲೀಸ್ ಠಾಣೆ ಬರುತ್ತದೆ. ಕೆ ಆರ್ ಸಾಗರ ವೃತ್ತ ಶ್ರೀರಂಗಪಟ್ಟಣ ಉಪ ವಿಭಾಗದ ಪರಿಧಿಯಲ್ಲಿ ಬರುತ್ತದೆ.

3. ದಿಃ 27.06.2023 ರಂದು ನನಗೆ ಕೊಡಿಯಾಲ ಗ್ರಾಮದಲ್ಲಿ ರಾಮೇಗೌಡರ ಮಗ ಶಿಶಿಕುಮಾರ ತನ್ನ ಮನೆಯ ಹತ್ತಿರ ಗಾಂಜಾ ಗಿಡ ಬೆಳೆದಿರುವುದಾಗಿ ಸುದ್ದಿ ಬಂದಿದೆ ಎಂದು DYSP ಹೆಚ್ ಎಸ್ ಮುರಳಿ ಯವರು ತಿಳಿಸಿದರು ಮತ್ತು ಗಾಂಜಾ ಬೆಳೆದಿದೆ ಎನ್ನುವ

ಸ್ಥಳಕ್ಕೆ ಹೋಗಿ ತನಿಖೆ ಮಾಡಬೇಕಾಗಿದೆ ಎಂದು ತಿಳಿಸಿದರು. ಆನಂತರ ಅರಕೆರೆ ಪೊಲೀಸ್ ಠಾಣೆಯ CPI ಸಿಬ್ಬಂದಿಯ ಜೊತೆಯಲ್ಲಿ ಕೊಡಿಯಾಲ ಗ್ರಾಮಕ್ಕೆ ಹೋದೆವು.

4. ಕೊಡಿಯಾಲ ಗ್ರಾಮದಲ್ಲಿ ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಪಂಚರಾಗಿ ಕೆಲಸ ಮಾಡುವಂತೆ ನೋಟೀಸನ್ನು DYSP ರವರು ಜಾರಿ ಮಾಡಿದರು. ಕೊಡಿಯಾಲ ಗ್ರಾಮದಲ್ಲಿ ಸರ್ಕಾರಿ ಫ್ರೌಢಶಾಲೆಯ ದೈಹಿಕ ಶಿಕ್ಷಕರಾಗಿದ್ದ ಡಿ.ವಿ.ಸಿದ್ದರಾಜು ಬಿನ್ ದೇವೆಗೌಡ ರವರಿಗೆ ತನಿಖೆ ಮಾಡುವಾಗ ಪಂಚರಾಗಿ ಕೆಲಸ ಮಾಡುವಂತೆ ನೋಟೀಸನ್ನು DYSP ರವರು ಜಾರಿ ಮಾಡಿದರು.

5. ಆನಂತರ DYSP, ನಾನು ಅರಕೆರೆ ಪೊಲೀಸ್ ಠಾಣೆಯ PSI ಸಿಬ್ಬಂದಿ ಡಿ. ವಿ. ಸಿದ್ದರಾಜು, ಮಹೇಶ ರವರ ಜೊತೆಯಲ್ಲಿ ಕೊಡಿಯಾಲ ಗ್ರಾಮದ ಡೈರಿ ಬಳಿ ಇದ್ದ ಶಶಿ ಕುಮಾರ ಬಿನ್ ರಾಮೇಗೌಡ ರವರ ಮನೆಯ ಹತ್ತಿರ ಹೋಗಿ ತನಿಖೆ ಮಾಡಿದೆವು. ನಮಗೆ ಮತ್ತು ನಮ್ಮ ಜೊತೆಯಲ್ಲಿ ಇದ್ದ ಪೊಲೀಸರಿಗೆ ಶಶಿಕುಮಾರ ರವರ ಮನೆಯ ಹಿಂಭಾಗ ಇರುವ ಜಾಗದಲ್ಲಿ 1 ಗಾಂಜಾ ಗಿಡ ಬೆಳೆಸಿರುವುದು ಕಾಣಿಸಿತು. ನಾವು ಸ್ಥಳದಲ್ಲಿ ಸಿಕ್ಕಿದ ಶಶಿಕುಮಾರನನ್ನು ವಿಚಾರಣೆ ಮಾಡಿದಾಗ ಆತ ಗಾಂಜಾ ಗಿಡವನ್ನು ಬೆಳೆದಿರುವುದಾಗಿ 3 ಅಥವಾ 6 ತಿಂಗಳಿಗೆ ಒಮ್ಮೆ ಅಪರಿಚಿತ ಸನ್ಯಾಸಿ ಬಂದು ಗಾಂಜಾ ಸೊಪ್ಪನ್ನು ಖರೀದಿ ಮಾಡಿ ಹೊಗುತ್ತಿರುವುದಾಗಿ ತಿಳಿಸಿದನು.

6. DYSP, ನಾನು ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರು ಶಶಿಕುಮಾರನಿಂದ ಗಾಂಜಾ ಗಿಡಗಳನ್ನು ಕೀಳಿಸಿದೆವು. DYSP ರವರ ಜೊತೆಯಲ್ಲಿ ಇದ್ದ HC 235 ನೇ

ರವರಿಂದ electronic ತೂಕದ ಯಂತ್ರವನ್ನು ತರಿಸಿದರು. ಸ್ಥಳದಲ್ಲಿ ಸಿಕ್ಕಿದ ಗಾಂಜಾ ಗಿಡವನ್ನು ತೂಕ ಮಾಡಿದಾಗ ಗಾಂಜಾ ಗಿಡ 770 ಗ್ರಾಂ ತೂಗಿತು. ಸದರಿ ಗಾಂಜಾ ಗಿಡವನ್ನು ಒಂದು ಬಿಳಿಯ ಬಟ್ಟೆಯ ಚೀಲಕ್ಕೆ ಹಾಕಿ ಬಾಯಿ ಕಟ್ಟಿ ಸೀಲು ಮಾಡಿ ಪಂಚರ ಸಮಕ್ಷಮ ನಿಪಿ–2 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿ ನಿಪಿ–3 ರಿಂದ 8 ರವರೆಗೆ ಗುರುಸಿತಿರುವ ಫೋಟೋಗಳನ್ನು ತೆಗೆಸಿ ವಶಪಡಿಸಿಕೊಂಡೆವು.

7. DYSP ರವರು ಮೇಲೆ ಹೇಳಿದಂತೆ ಗಾಂಜಾ ಗಿಡವನ್ನು ವಶಪಡಿಸಿಕೊಂಡು ಆರೋಪಿ ಶಶಿಕುಮಾರನನ್ನು ನಮ್ಮ ಸ್ವಾಧೀನಕ್ಕೆ ಹಿಡಿದುಕೊಂಡು ಅರಕೆರೆ ಪೊಲೀಸ್ ಠಾಣೆಗೆ ಹೋಗಿ ವರದಿಯನ್ನು ತಯಾರಿಸಿ ಅರಕರೆ ಠಾಣಾದಿಕಾರಿಯಾಗಿದ್ದ PSI ಚಾಸಾ–18 ನೇ ಎಂ ಆರ್ ಬ್ಯಾಳಿ ರವರ ಕೈಗೆ ಕೊಟ್ಟರು. DYSP ರವರು ವರದಿಯ ಜೊತೆಯಲ್ಲಿ ನಿಪಿ–2 ರಲಿ ಗುರುತಿಸಿರುವ 1 ರಿಂದ 8 ರವರೆಗೆ ಗುರುತಿಸಿರುವ ಮಹೇಶ ಬಿನ್ ಪುಟ್ಟಶೆಟ್ಟಿರವರಿಗೆ ಜಾರಿ ಮಾಡಿರುವ ನೋಟೀಸು, ಮಹಜರು ಮತ್ತು ಫೋಟೋಗಳನ್ನು ಚಾಸಾ–18 ರವರ ಕೈಗೆ ಕೊಟ್ಟಿದ್ದಾರೆ. DYSP ರವರು ವರದಿಯ ಜೊತೆಯಲ್ಲಿ ಡಿ ವಿ ಸಿದ್ದರಾಜು ರವರಿಗೆ ಜಾರಿ ಮಾಡಿರುವ ನೊಟೀಸು ಮತ್ತು ಆರೋಪಿಯನ್ನು ಚಾಸಾ–18 ರವರ ಸ್ವಾಧೀನಕ್ಕೆ ಕೊಟ್ಟಿದ್ದಾರೆ.

8. ಈ ಸಾಕ್ಷಿ ನಿಪಿ–2 ರಲ್ಲಿ ಗುರುತಿಸಿರುವ ಮಹಜರಿನಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿಯನ್ನು ನಿಪಿ–2(ಸಿ) ಎಂದು ಗುರುತಿಸಲಾಯಿತು.

9. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಶಶಿ ಕುಮಾರನನ್ನು ದಿಃ 27.06.2023 ರಂದು ಅರಕೆರೆ ಗ್ರಾಮದಲ್ಲಿ ಆತನ ಮನೆಯ ಹತ್ತಿರ ಸಿಬ್ಬಂದಿಯ ಸಹಾಯದಿಂದ DYSP ರವರು ಹಿಡಿದಿದ್ದಾರೆ.

10. ನಿಪಿ–4, 5, 6, 7 ರಲ್ಲಿ ಗುರುತಿಸಿರುವ ಫೋಟೋಗಳಲ್ಲಿ ನಾನು, DYSP, ಆರೋಪಿ ಶಶಿಕುಮಾರ್ ಪಂಚರಾದ ಮಹೇಶ ಮತ್ತ ಸಿದ್ದರಾಜು, ನಾವು ತನಿಖೆ ಮಾಡಿದ ಸ್ಥಳ, ಗಾಂಜಾ ಗಿಡ, ಗಾಂಜಾ ಗಿಡ ತೂಕ ಮಾಡಿದ ಯಂತ್ರಗಳು ಕಾಣಿಸುತ್ತಿವೆ.

11. ಘಟನೆಯ ಕುರಿತು ನಾನು ಚಾಸಾ–18 ನೇ ರವರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ.

<u>ಪಾಟೀ ಸವಾಲುಃ– ಆರೋಪಿ ಪರವಾಗಿ ಶ್ರೀ. ಜೈಶಂಕರ್ ವಕೀಲರಿಂದಃ–</u>

1. ದಿಃ 27.06.2023 ರಂದು ನನಗೆ ಕೊಡಿಯಾಲ ಗ್ರಾಮದಲ್ಲಿ ರಾಮೇಗೌಡರ ಮಗ ಶಿಶಿಕುಮಾರ ತನ್ನ ಮನೆಯ ಹತ್ತಿರ ಗಾಂಜಾ ಗಿಡ ಬೆಳೆದಿರುವುದಾಗಿ ಸುದ್ದಿಯನ್ನು DYSP ರವರು ತಿಳಿಸಿದರು, ಆನಂತರ ಅರಕೆರೆ ಪೊಲೀಸ್ ಠಾಣೆಯ PSI ರವರಿಗೆ ತಿಳಿಸಿ ಗಾಂಜಾ ಬೆಳೆದಿದೆ ಎನ್ನುವ ಸ್ಥಳಕ್ಕೆ ಹೋಗಿ ತನಿಖೆ ಮಾಡಬೇಕಾಗಿದೆ ಎಂದು ತಿಳಿಸಿದರು, ಆನಂತರ ಅರಕೆರೆ ಪೊಲೀಸ್ ಠಾಣೆಯ CPI ಸಿಬ್ಬಂದಿಯ ಜೊತೆಯಲ್ಲಿ ಕೊಡಿಯಾಲ ಗ್ರಾಮಕ್ಕೆ ಹೋದೆವು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

2. ಆನಂತರ DYSP ರವರ ಜೊತೆಯಲ್ಲಿ, ಅರಕೆರೆ ಪೊಲೀಸ್ ಠಾಣೆಯ PSI ಸಿಬ್ಬಂದಿ ಡಿ. ವಿ. ಸಿದ್ದರಾಜು, ಮಹೇಶ ರವರ ಜೊತೆಯಲ್ಲಿ ಕೊಡಿಯಾಲ ಗ್ರಾಮದ ಡೈರಿ ಬಳಿ ಇದ್ದ ಶಶಿ ಕುಮಾರ ಬಿನ್ ರಾಮೇಗೌಡ ರವರ ಮನೆಯ ಹತ್ತಿರ ಹೋಗಿ ತನಿಖೆ ಮಾಡಿದೆವು. ನನಗೆ ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರಿಗೆ ಶಶಿಕುಮಾರ ರವರ ಮನೆಯ ಹಿಂಭಾಗ ಇರುವ ಜಾಗದಲ್ಲಿ 1 ಗಾಂಜಾ ಗಿಡ ಬೆಳೆಸಿರುವುದು ಕಾಣಿಸಿತು. ನಾವು ಸ್ಥಳದಲ್ಲಿ ಸಿಕ್ಕಿದ ಶಶಿಕುಮಾರನನ್ನು ವಿಚಾರಣೆ ಮಾಡಿದಾಗ ಆತ ಗಾಂಜಾ ಗಿಡವನ್ನು ಬೆಳೆದಿರುವುದಾಗಿ 3 ಅಥವಾ 6 ತಿಂಗಳಿಗೆ ಒಮ್ಮೆ ಅಪರಿಚಿತ ಸನ್ಯಾಸಿ ಬಂದು ಗಾಂಜಾ ಸೊಪ್ಪನ್ನು ಖರೀದಿ ಮಾಡಿ ಹೊಗುತ್ತಿರುವುದಾಗಿ ತಿಳಿಸಿದನು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

3. DYSP, ನಾನು ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರು ಶಶಿಕುಮಾರನಿಂದ ಗಾಂಜಾ ಗಿಡಗಳನ್ನು ಕೀಳಿಸಿದೆವು, DYSP ರವರರ ಜೊತೆಯಲ್ಲಿ ಇದ್ದ HC 235 ನೇ ರವರಿಂದ electronic ತೂಕದ ಯಂತ್ರವನ್ನು ತರಿಸಿದರು, ಸ್ಥಳದಲ್ಲಿ ಸಿಕ್ಕಿದ ಗಾಂಜಾ ಗಿಡವನ್ನು ತೂಕ ಮಾಡಿದಾಗ ಗಾಂಜಾ ಗಿಡ 770 ಗ್ರಾಂ ತೂಗಿತು. ಸದರಿ ಗಾಂಜಾ ಗಿಡವನ್ನು ಒಂದು ಬಿಳಿಯ ಬಟ್ಟೆಯ ಚೀಲಕ್ಕೆ ಹಾಕಿ ಬಾಯಿ ಕಟ್ಟಿ ಸೀಲು ಮಾಡಿ ಪಂಚರ ಸಮಕ್ಷಮ ನಿಪಿ-2 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿ ನಿಪಿ-3 ರಿಂದ 8 ರವರೆಗೆ ಗುರುಸಿತಿರುವ ಫೋಟೋಗಳನ್ನು ತೆಗೆಸಿ ವಶಡಿಪಸಿಕೊಂಡೆವು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

4. DYSP ರವರು ಮೇಲೆ ಹೇಳಿದಂತೆ ಗಾಂಜಾ ಗಿಡವನ್ನು ವಶಪಡಿಸಿಕೊಂಡು ಅರಕೆರೆ ಪೊಲೀಸ್ ಠಾಣೆಗೆ ಹೋಗಿ ವರದಿಯನ್ನು ತಯಾರಿಸಿ ಅರಕರೆ ಠಾಣಾದಿಕಾರಿಯಾಗಿದ್ದ PSI ಚಾಸಾ-18 ನೇ ಎಂ ಆರ್ ಬ್ಯಾಳಿ ರವರ ಕೈಗೆ ಕೊಟ್ಟರು, ವರದಿಯ ಜೊತೆಯಲ್ಲಿ ನಿಪಿ-2 ರಲಿ ಗುರುತಿಸಿರುವ 1 ರಿಂದ 8 ರವರೆಗೆ ಗುರುತಿಸಿರುವ ಮಹೇಶ ಬಿನ್ ಪುಟ್ಟಶೆಟ್ಟಿರವರಿಗೆ ಜಾರಿ ಮಾಡಿರುವ ನೋಟೀಸು, ಮಹಜರು ಮತ್ತು ಫೋಟೋಗಳನ್ನು ಚಾಸಾ-18 ರವರ ಕೈಗೆ ಕೊಟ್ಟರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

5. ನನಗೆ ಗಾಂಜಾ ಗಿಡ ಸಿಕ್ಕಿದ ಜಾಗ ಆರೋಪಿಯ ಮಾಲೀಕತ್ವ ಜಾಗ ಅಲ್ಲ ಎನ್ನುವುದು ನಿಜ. ಆದರೆ ಸದರಿ ಜಾಗವನ್ನು ಬಾಡಿಗೆಯಂತೆ ಆರೋಪಿ ತನ್ನ ಸ್ವಾಧಿನದಲ್ಲಿ ಇಟ್ಟುಕೊಂಡಿದ್ದನು.

6. ಆರೋಪಿಯು ವಾಸವಾಗಿದ್ದ ಮನೆಯಿಂದ ಸುಮಾರು 50 ರಿಂದ 100 ಮೀಟರ್ ದೂರದಲ್ಲಿ ಅನೇಕ ಮನೆಗಳು ಇವೆ. ಆರೋಪಿಯ ಮನೆಯ ಹತ್ತಿರದಲ್ಲಿ ಇದ್ದ ಮನೆಗಳ ವಾಸಿಗಳನ್ನು ಪಂಚರಾಗಿ ಕೆಲಸ ಮಾಡುವಂತೆ DYSP ರವರು ಕರೆದಿಲ್ಲ.

7. ಗಾಂಜಾ ಗಿಡ ಸಿಕ್ಕಿದ ಜಾಗಕ್ಕೂ ಆರೋಪಿಗೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ.

8. DYSP ಮತ್ತು ನಾನು ಆರೋಪಿಯ ವಿರುದ್ಧ ಸುಳ್ಳು ದಾಖಲೆಗಳನ್ನು ಮತ್ತು ಫೋಟೋಗಳನ್ನು ಸೃಷಿಸಿದ್ದೇನೆ ಎನ್ನುವುದು ಸರಿಯಲ್ಲ.

9. ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u> ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜಿ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.